# ವಾಸನಾತ್ಯಾಗ



❁ ಮನಸ್ಸಿನಿಂದ ಎಲ್ಲಾ ಆಸೆಗಳನ್ನು ತ್ಯಜಿಸಿದ ಹೊರತು ಭಗವಂತನ ಸಾಕ್ಷಾತ್ಕಾರ ದೊರೆಯದು. ಸಾಧುವು ಸಂಚಯ ಮಾಡಿ ಇಡಲಾರ. 'ಹಕ್ಕಿ ಮತ್ತು ಪರಿವ್ರಾಜಕ ಸಂನ್ಯಾಸಿ ಸಂಚಯ ಮಾಡಿ ಇಡುವುದಿಲ್ಲ.' ಇಲ್ಲಿನ ಭಾವ ಅಂಥದು: ಕೈ ಶುದ್ಧಿಮಾಡಿಕೊಳ್ಳುವುದಕ್ಕೆ ಒಂದು ಹಿಡಿ ಮಣ್ಣೂ ತಂದಿಡುವ ಹಾಗಿಲ್ಲ. ಎಲೆ ಅಡಿಕೆ ಚೀಲಕ್ಕೆ ಎಲೆ ಅಡಿಕೆ ಹಾಕಿಕೊಂಡು ಬರುವ ಹಾಗಿಲ್ಲ.

❁ ಸಂಸಾರಾಸಕ್ತಿಯನ್ನು ನಿರ್ಮೂಲ ಮಾಡುವುದಕ್ಕೆ ಸಾಧನೆ ಭಜನೆಯನ್ನು ಮಾಡುವುದು. ಭಗವಂತನ ಚಿಂತನೆ ಹೆಚ್ಚುಹೆಚ್ಚಿದಂತೆಲ್ಲ ಸಂಸಾರದ ಸಾಮಾನ್ಯ ವಸ್ತುಗಳ ಭೋಗಾಸಕ್ತಿ ಕಡಿಮೆಯಾಗುತ್ತಾ ಬರುತ್ತದೆ. ಆತನ ಪಾದಪದ್ಮಗಳ ಕಡೆ ಭಕ್ತಿ ಎಷ್ಟು ಪ್ರಮಾಣದಲ್ಲಿ ಬೆಳೆಯುವುದೊ ಅಷ್ಟೇ ಪ್ರಮಾಣದಲ್ಲಿ ವಿಷಯಾಸಕ್ತಿ ಕಡಿಮೆ ಕಡಿಮೆಯಾಗುತ್ತಾ ಬರುತ್ತದೆ. ಅಷ್ಟೇ ಪ್ರಮಾಣದಲ್ಲಿ ದೇಹ ಸುಖದ ಕಡೆ ಹಾತೊರೆಯುವುದು ಕಡಿಮೆ ಕಡಿಮೆಯಾಗುತ್ತಾ ಬರುತ್ತದೆ. ಪರಸ್ತ್ರೀ ತಾಯಿಯೇ ಎಂಬ ಬೋಧೆಯಾಗುತ್ತದೆ. ಸ್ವಪತ್ನಿ ಅಧ್ಯಾತ್ಮ ಜೀವನದ ಸಹಾಯಕಿ ಎಂಬ ಬೋಧೆಯಾಗುತ್ತದೆ. ಪಶುಪ್ರವೃತ್ತಿ ಹೊರಟುಹೋಗುತ್ತದೆ. ದೇವಭಾವ ಬಂದುಬಿಡುತ್ತದೆ. ಸಂಸಾರಾಸಕ್ತಿ ಒಮ್ಮೆಲೇ ಬಿಟ್ಟು ತೊಲಗಿ ಹೋಗುತ್ತದೆ. ಆಗ ನೀನು ಸಂಸಾರದಲ್ಲಿ ಇದ್ದರೂ ಜೀವನ್ಮುಕ್ತನಾಗಿ ಓಡಾಡಿಕೊಂಡು ಇರುತ್ತೀಯೆ.

❁ ಯಾರಿಗೆ ಭಗವದ್ಭಾವನೆಯ ಉದ್ದೀಪನೆಯಾಗುತ್ತದೆ? ವಿಷಯಾತ್ಮಿಕ ಬುದ್ಧಿಯನ್ನು ತ್ಯಜಿಸಿರತಕ್ಕವರಿಗೆ. ಯಾರ ವಿಷಯ ರಸ ಬತ್ತಿಹೋಗಿರುವುದೊ ಅವರಿಗೆ ಒಂದು ಸ್ವಲ್ಪದರಿಂದಲೆ ಭಗವದ್ಭಾವನೆಯ ಉದ್ದೀಪನೆಯಾಗಿಬಿಡುತ್ತದೆ. ಬೆಂಕಿಕಡ್ಡಿ ಒದ್ದೆಯಾಗಿದ್ದರೆ ಒಂದು ಸಾವಿರ ಸಲ ಗೀಚಿದರೂ ಅದು ಹತ್ತದು. ಆದರೆ ಒಣಗಿದರೆ ಒಂದು ಸ್ವಲ್ಪ ಗೀಚಿದರೇ ಸಾಕು 'ಧಗ್' ಎಂದು ಹತ್ತಿಕೊಂಡು ಬಿಡುತ್ತದೆ.

❁ ಸಂಸಾರವನ್ನು ಒಮ್ಮೆಗೆಯೆ ತ್ಯಾಗಮಾಡಿಬಿಡುವುದರ ಆವಶ್ಯಕತೆಯೇನಿದೆ? ಆಸಕ್ತಿ ಹೋಯಿತು ಅಂದರೆ ಮುಗಿಯಿತು. ಆದರೆ ಸಾಧನೆ ಆವಶ್ಯಕ; ಇಂದ್ರಿಯಗಳೊಡನೆ ಯುದ್ಧ ಮಾಡಲೇಬೇಕು.

❁ ಯಾರು ಭಗವಚ್ಚಿಂತನೆ ಮಾಡುತ್ತಾರೊ, ಯಾರು ವಿಷಯಗಳಲ್ಲಿ ಆಸಕ್ತಿ – ಕಾಮಕಾಂಚನದಲ್ಲಿ ಆಸಕ್ತಿ ತೊಲಗಿ ಹೋಗಲು ಹಗಲೂ ಇರುಳೂ ಭಗವಂತನ ಪ್ರಾರ್ಥನೆ ಮಾಡುತ್ತಾರೊ, ಯಾರಿಗೆ ವಿಷಯ ರಸ ಕಹಿಯಾಗಿ ತೋರುವುದೊ, ಯಾರಿಗೆ ಹರಿಪಾದಪದ್ಮಸುಧೆ ಹೊರತು ಬೇರೆ ಏನೂ ರುಚಿಸದೊ ಅಂಥವರ ಸ್ವಭಾವ ಹಂಸಪಕ್ಷಿಯ ಹಾಗೆ ಆಗಿಬಿಟ್ಟಿರುತ್ತದೆ. ಹಂಸದ ಎದುರು ನೀರು ಬೆರೆಸಿದ ಹಾಲನ್ನು ಇಡಿ. ಅದು ನೀರನ್ನು ಬಿಟ್ಟು ಹಾಲನ್ನು ಕುಡಿದುಬಿಡುತ್ತದೆ. ಅದರ ನಡೆಯನ್ನು ನೀನು ನೋಡಿಲ್ಲವೇನು? ಅದು ನೇರವಾಗಿ ಮುಂದು ಮುಂದಕ್ಕೆ ಮುಂಬರಿದುಬಿಡುತ್ತದೆ. ಅದೇ ರೀತಿ ಶುದ್ಧ ಭಕ್ತರ ನಡೆಯೂ ಕೇವಲ ಭಗವಂತನ ಕಡೆಗೆಯೇ. ಅವರಿಗೆ ಬೇರೆ ಏನೂ ಬೇಕಾಗಿಲ್ಲ.

❁ ಸಂಸಾರಿ ನಿಷ್ಕಾಮ ಭಾವನೆಯಿಂದ ಯಾರಿಗಾದರೂ ದಾನ ಮಾಡಿದರೆ ಅದು ತನ್ನ ಉಪಕಾರಕ್ಕಾಗಿಯೇ ವಿನಾ ಪರರ ಉಪಕಾರಕ್ಕಲ್ಲ. ಸರ್ವಭೂತಗಳಲ್ಲಿಯೂ ಭಗವಂತನು ಇರುವುದರಿಂದ ಆತನ ಸೇವೆ ಮಾಡಿದಂತೆಯೇ ಆಗುತ್ತದೆ. ಹರಿಯ ಸೇವೆ ಮಾಡಿದರೆ ಅದು ತನಗೇ ಉಪಕಾರ ಮಾಡಿಕೊಂಡಂತಾಗುವುದೇ ವಿನಾ ಪರರಿಗಲ್ಲ.

❁ ಕಾಮಕಾಂಚನಾಸಕ್ತಿ ನಮ್ಮನ್ನು ಬಿಟ್ಟು ತೊಲಗಿತು ಎಂದರೆ, ಮನಸ್ಸು ಮತ್ತು ಬುದ್ಧಿ ಶುದ್ಧವಾಗಿಬಿಡುತ್ತದೆ. ಆಗ ಶುದ್ಧ ಮನಸ್ಸು ಶುದ್ಧ ಬುದ್ಧಿ ಅನನ್ಯವಾಗಿಬಿಡುತ್ತದೆ. ಆತ ಶುದ್ಧ ಮನಸ್ಸಿಗೆ ಗೋಚರನಾಗುತ್ತಾನೆ.

❁ ಕಾಮಕಾಂಚನಾಸಕ್ತಿ ಮನಸ್ಸನ್ನು ಬಿಟ್ಟು ತೊಲಗಿ ಹೋಯಿತು ಅಂದರೆ ಇನ್ನು ತಡೆಯಾಗಿ ಉಳಿದುಕೊಂಡಿರುವುದು ಬೇರೆ ಏನಿದೆ? ಬಳಿಕ ಕೇವಲ ಬ್ರಹ್ಮಾನಂದ, ಬ್ರಹ್ಮಾನಂದ.

❁ ಭಗವಂತನ ಸಾಕ್ಷಾತ್ಕಾರ ದೊರೆಯಬೇಕಾದರೆ ತೀವ್ರ ವೈರಾಗ್ಯ ಅತ್ಯಂತ ಆವಶ್ಯಕ. ಯಾವುದು ಭಗವಂತನ ಸಾಕ್ಷಾತ್ಕಾರಕ್ಕೆ ತಡೆಯಾಗಿ ತೋರಿ ಬರುವುವೊ ಅವನ್ನೆಲ್ಲ ಒಡನೆಯೇ ತ್ಯಾಗಮಾಡಿಬಿಡಬೇಕು. ಮುಂದೆ ನೋಡೋಣ ಅಂತ ಸುಮ್ಮನೆ ಕೈಕಟ್ಟಿ ಕುಳಿತಿರಬಾರದು. ಕಾಮಕಾಂಚನವೇ ಭಗವಂತನ ಸಾಕ್ಷಾತ್ಕಾರಕ್ಕೆ ಅಡ್ಡಲಾಗಿ ಬಿದ್ದಿರುವ ತಡೆ. ಮನಸ್ಸನ್ನು ಅವುಗಳ ಕಡೆಯಿಂದ ಎಳೆದುಕೊಂಡು ಬಿಡಬೇಕು.

❁ ಮೊದಲು ಜ್ಞಾನವನ್ನು ಪಡೆದು — ಭಗವಂತನ ಸಾಕ್ಷಾತ್ಕಾರವನ್ನು ಪಡೆದು ಕಳಂಕಸಾಗರದಲ್ಲಿ ಈಜಾಡಿದರೂ ಕಳಂಕ ಮಾತ್ರ ಆತನ ಶರೀರಕ್ಕೆ ತಾಗದು. ಬಳಿಕ ಆತ ಬದಿಯಲ್ಲಿ ವಾಸಿಸುವ ಮೀನಿನಂತೆ ವಾಸಿಸಬಲ್ಲ. ಭಗವಂತನ ಸಾಕ್ಷಾತ್ಕಾರವನ್ನು ಪಡೆದ ನಂತರ ಆತ ವಾಸಿಸುವ ಸಂಸಾರ, ವಿದ್ಯೆಯ ಸಂಸಾರವಾಗಿ ಪರಿಣಮಿಸುತ್ತದೆ. ಅದರಲ್ಲಿ ಕಾಮಕಾಂಚನದ ಗಂಧವೇ ಇರದು.

❁ ವಿಷಯಾಸಕ್ತಿ ಎಷ್ಟೆಷ್ಟು ಮಟ್ಟಿಗೆ ಕಡಿಮೆಯಾಗುವುದೊ ಅಷ್ಟಷ್ಟು ಮಟ್ಟಿಗೆ ಆತ್ಮಜ್ಞಾನದ ಕಡೆ ಮುಂದುವರಿಯಬಹುದು.

ಶ್ರೀರಾಮಕೃಷ್ಣ ವಚನವೇದದಿಂದ